**ಅಸಲು ದಾವ ಸಂಖ್ಯೆಃ 522/2020**

**ಪಿ.ಡಬ್ಲೂ -1**

ದಿಃ 04-08-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**1 ನೇ ಪ್ರತಿವಾದಿ ಪರ ಪಾಟೀ ಸವಾಲು ಶ್ರೀ V.S.N ರವರಿಂದಃ-**

1. ನಾನು ದ್ವಿತೀಯ ಪಿಯುಸಿ ವರೆಗ ವಿದ್ಯಾಭಾಸ ಮಾಡಿರುತ್ತೇನೆ. ನನ್ನ ಜನ್ಮ ದಿನಾಂಕ 27-03-1966. ದಾವಾ ಆಸ್ತಿಯ ಮೂಲ ಮಾಲಿಕರು ಕುಬೇರ ನರಸಗೌಡಾ ಎಂದರೆ ಸರಿ. ನನ್ನ ಜನ್ಮ ತಂದೆಯ ಹೆಸರು ಅಣ್ಣಪ್ಪಾ ಭರಮಾ ಕಡಹಟ್ಟಿ. ಕುಬೇರ ನರಸಗೌಡಾ ಅವರಿಗೆ ಇಬ್ಬರು ಮಕ್ಕಳು ಅವರೆಂದರೆ ಭರಮಣ್ಣಾ ಮತ್ತು ಅಪ್ಪಯ್ಯಾ ಎಂದರೆ ಸರಿ. ಅಪ್ಪಯ್ಯವರಿಗೆ ಅಪ್ಪಾಸಾಬ ಎಂದು ಕರೆಯುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಭರಮಣ್ಣಾ ಅವರ ಹೆಂಡತಿಯ ಹೆಸರು ದೇವಕಿಬಾಯಿ ಎಂದರೆ ಸರಿ. ಸದರಿ ದೇವಕಿಬಾಯಿಗೆ ಮೂರು ಜನ ಹೆಣ್ಣು ಮಕ್ಕಳು ಎಂದರೆ ಸರಿ. ಅವರ ಹೆಸರು ಕುಸಮವ್ವಾ, ಮಾಣಿಕ, ಭಾಮಿನಿ. ಅಪ್ಪಾಸಾಹೇಬ ಅವರಿಗೆ ಜೀವನವ್ವಾ ಎಂದು ಒಬ್ಬಳೇ ಮಗಳು ಎಂದರೆ ಜೀವನವ್ವಾ ಅಪ್ಪಾಸಹೇಬರ ಹೆಂಡತಿಯ ಹೆಸರು ಎಂದು ನುಡಿಯುತ್ತಾರೆ. ಅಪ್ಪಾಸಾಹೇಬ ಅವರ ಮಗಳ ಹೆಸರು ಚಿಮ್ಮವ್ವಾ. ಕುಸಮವ್ವಾ, ಮಾಣಿಕ, ಭಾಮಿನಿ ಮತ್ತು ಚಿಮ್ಮವ್ವಾ ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಸದರಿ ಕುಸಮವ್ವಾ, ಮಾಣಿಕ, ಭಾಮಿನಿ ಮತ್ತು ಚಿಮ್ಮವ್ವಾ ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲು ತೊಂದರೆ ಇದೆ ಎಂದರೆ ನಾನು ಮಾಲಿಕನಾಗಿದ್ದು ಅವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದು ನುಡಿಯುತ್ತಾರೆ.

2. ನಾನು ನರಸಗೌಡಾ ಅವರ ಕುಟುಂಬಕ್ಕೆ ದತ್ತಕಕ್ಕೆ ಬಂದ ಬಗ್ಗೆ ದಾಖಲಾತಿಯನ್ನು ಹಾಜರಪಡಿಸಿರುತ್ತೇನೆ. ವಾದಿಯು ಸಲ್ಲಿಸಿದ ದಾಖಲಾತಿಗಳನ್ನು ತೋರಿಸಲಾಗಿ ಅದರಲ್ಲಿ ಸದರಿ ದಾಖಲಾತಿ ಇಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ನಾನು ಸದರಿ ದಾಖಲಾತಿಯನ್ನು ನಮ್ಮ ವಕೀಲರ ಬಳಿ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ದತ್ತಕ ಪತ್ರವನ್ನು ನ್ಯಾಯಾಲಯಕ್ಕೆ ಹಾಜರಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ . ಭರಮಣ್ಣಾ ದೇವಪ್ಪಾ ನರಸಗೌಡಾ 1 ನೇ ಪ್ರತಿವಾದಿಯ ಅಜ್ಜ ಎಂದರೆ ಸರಿ. ಮನೆ ನಂಬರ 123 ರ ಅರ್ಧ ಭಾಗವನ್ನು ಭರಮಣ್ಣಾ ದೇವಪ್ಪಾ ನರಸಗೌಡಾ ಅವರ 1958 ರಲ್ಲಿ ಖರೀದಿಸಿರುತ್ತಾರೆ ಎಂದರೆ ಸರಿ. ಸದರಿ ಖರೀದಿಯ ನಂತರ ಭರಮಣ್ಣಾ ದೇವಪ್ಪಾ ನರಸಗೌಡಾ ಅವರು ಖರೀದಿಸಿದ ಭಾಗಕ್ಕೆ 123/1 ಎಂದು ಮನೆ ನಂಬರನ್ನು ನೀಡಲಾಗಿದೆ ಎಂದರೆ ಸರಿ. ಭರಮಣ್ಣಾ ದೇವಪ್ಪಾ ನರಸಗೌಡಾ ಅವರು ನಿರ್ಮಿತ ಕಟ್ಟಡ ಮತ್ತು ಖಾಲಿ ಜಾಗವನ್ನು ಸೇರಿ ಖರೀದಿ ಮಾಡಿರುತ್ತಾರೆ ಎಂದರೆ ಸರಿ . ಮನೆ ನಂಬರ 123/1 ರ ಖರೀದಿ

ಪತ್ರದಂತೆ ಅದರ ಅಳತೆಯು ಪೂರ್ವ-ಪಶ್ಚಿಮ 17.1, ಉತ್ತರ-ದಕ್ಷಿಣ -80 ಅಡಿ ಇದೆ ಎಂದರೆ ಸಾಕ್ಷಿಯು ಅರ್ಧ ಭಾಗ ಖರೀದಿಸಿದ ವಿಚಾರ ಗೊತ್ತು ಆದರೆ ವಿಸ್ತೀರ್ಣ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಭರಮಣ್ಣಾ ದೇವಪ್ಪಾ ನರಸಗೌಡಾ ಅವರು ಖರೀದಿಸಿದ ಖಾಲಿ ಜಾಗದ ವಿಸ್ತೀರ್ಣ 19.6 X120 ಚದರ ಅಡಿ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಪೂರ್ವಕ್ಕೆ ಮನೆ ನಂಬರ 122 ಇದೆ ಎಂದರೆ ಸರಿ.

3. ಸಾಕ್ಷಿಗೆ ಒಂದು ಛಾಯಾ ಚಿತ್ರವನ್ನು ತೋರಿಸಿ ಸದರಿ ಛಾಯಾ ಚಿತ್ರದಲ್ಲಿರುವ ಎಡಭಾಗದ ಕಟ್ಟಡವು ಮನೆ ನಂಬರ 122 ಎಂದು ನುಡಿಯುತ್ತಾರೆ. ಸದರಿ ಛಾಯಾ ಚಿತ್ರದಲ್ಲಿರುವ ಅಕ್ಷರಾ ಎಂದು ಬರೆದಿರುವ ಒಬ್ಬ ಮಹಿಳೆ ನಿಂತಿರುವ ಕಟ್ಟಡವು 123/1 ಎಂದು ನುಡಿಯುತ್ತಾರೆ . ಸದರಿ ಛಾಯಾ ಚಿತ್ರವನ್ನು ನಿಡಿ-1 ಎಂದು ಗುರುತಿಸಲಾಯಿತು. 1 ನೇ ಪ್ರತಿವಾದಿಯು ನಿಡಿ-1 ರಲ್ಲಿ ಮನೆ ನಂಬರ 123/1 ರ ಗೋಡೆಗೆ ಯಾವುದೇ ರೀತಿಯ ತೊಂದರೆ ಉಂಟು ಮಾಡಿಲ್ಲ ಎಂದರೆ ಸರಿ. ನಿಡಿ-1 ರಲ್ಲಿ ಎರಡು ಕಟ್ಟಡಗಳ ನಡುವೆ ಪಿಲ್ಲರ ಹಾಕಲು ಅಳವಡಿಸಿದ ಕಬ್ಬಿಣ ಇದ್ದ ಭಾಗದಲ್ಲಿ ನಮ್ಮ ಹಳೆ ಮನೆ ಇತ್ತು ಎಂದರೆ ಸರಿ. ನಿಡಿ-1 ರಲ್ಲಿ ಇರುವಂತೆ ನಾನು ಹಳೆಯ ಮನೆಯನ್ನು ಕೆಡವಿ ಹೊಸ ಮನೆ ನಿರ್ಮಾಣದ ಕಾರ್ಯವನ್ನು ಆರಂಭ ಮಾಡಿದ್ದೇನೆ ಎಂದರೆ ಸರಿ. 2 ನೇ ಪ್ರತಿವಾದಿಯು ಕಾರ್ಪೊರೇಶನವರ ಕಡೆಯಿಂದ ಅನುಮತಿ ಪಡೆದು ಮನೆ ನಿರ್ಮಾಣ ಮಾಡಿದ್ದಾರೆ ಎಂದರೆ ಸರಿಯಲ್ಲ . ಈ ಕೆಸಿಗೆ ಸಂಬಂಧಿಸಿದಂತೆ ಈಗಾಗಲೆ ಹಾಜರಪಡಿಸಿದ ಸಾಕ್ಷಿಯನ್ನು ಹೊರತು ಪಡಿಸಿ ನನ್ನ ಬಳಿ ಇನ್ನು ಸಾಕ್ಷಿ ಇದೆ.

4. ವಾದ ಪತ್ರದ ಜೊತೆ ಸಲ್ಲಿಸಲಾದ ನಾಕಶೆಯು ಭೂ ದಾಖಲೆ ಕಚೇರಿಯಿಂದ ಹಾಜರ ಪಡಿಸಿದ ನಕಾಶೆ ಆಗಿರುವುದಿಲ್ಲ. ಸದರಿ ನಕಾಶೆಯು ಖಾಸಗಿ ವ್ಯಕ್ತಿಯಿಂದ ತಯಾರಿಸಿದ್ದು ಆಗಿರುತ್ತದೆ. ಸದರಿ ನಕಾಶೆಯನ್ನು ನಮ್ಮ ಕೇಸಿಗೆ ಅನೂಕೂಲವಾಗುವಂತೆ ತಯಾರಿಸಿ ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಸರ್ಕಾರಿ ಮೋಜಣಿದಾರರಿಂದ ಮೋಜಣಿ ಮಾಡಿಸಲು ನನಗೆ ಯಾವುದೇ ತೊಂದರೆ ಇಲ್ಲ. 1 ನೇ ಪ್ರತಿವಾದಿಯು ದಾವಾ ಆಸ್ತಿಯ ಪಶ್ಚಿಮ ದಿಕ್ಕಿನಲ್ಲಿ ಯಾವುದೇ ರೀತಿಯ ಒತ್ತುವರಿ ಮಾಡಿಲ್ಲ ಎಂರೆ ಸರಿಯಲ್ಲ . ಸಾಕ್ಷಿ ಮುಂದುವರೆದು ಹಿಂದುಗಡೆ ಖಾಲಿ ಜಾಗದಲ್ಲಿ ಒತ್ತುವರಿ ಮಾಡಿದ್ದಾರೆ ಎಂದು ನುಡಿಯುತ್ತಾರ ಸದರಿ ಒತ್ತುವರಿಯನ್ನು ಮಾಡಿದ ಬಗ್ಗೆ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5. 2 ನೇ ಪ್ರತಿವಾದಿ ಸೆಟಬ್ಯಾಕ ಎರಿಯಾ ಬಿಟ್ಟು ತನ್ನ ಕಟ್ಟಡ ನಿರ್ಮಾಣ ಮಾಡಿದ್ದಾರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ತನ್ನ ಕಟ್ಟಡದ ಪೂರ್ವ ದಿಕ್ಕಿಗೆ ಮೂರು ಅಡಿ ಸೆಟ ಬ್ಯಾಕ ಎರಿಯಾ ಬಿಟ್ಟು ಕಟ್ಟಡ ನಿರ್ಮಾಣ ಮಾಡಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಪಶ್ಚಿಮಕ್ಕೆ ಸೆಟಬಾಕ ಎರಿಯಾ ಬಿಟ್ಟಿಲ್ಲ ಎಂದು ನುಡಿಯುತ್ತಾರೆ. ನೀವು ನಿಮ್ಮ ಕಟ್ಟಡದ ಪಶ್ಚಿಮಕ್ಕೆ ಸೆಟಬ್ಯಾಕ ಎರಿಯಾ ಬಿಟ್ಟಿಲ್ಲ ಎಂದರೆ ಸಾಕ್ಷಿಯು ಅಲ್ಲಿ ಸಾಮೂಹಿಕ ಗೋಡೆ ಇದೆ ಎಂದು ನುಡಿಯುತ್ತಾರೆ.

6. ನನ್ನನ್ನು ದೇವಕಿ ಬಾಯಿ ಅವರು ದತ್ತಕಕ್ಕೆ ಪಡೆದುಕೊಂಡಿರುತ್ತಾರೆ . ನಾನು ದಾವಾ ಆಸ್ತಿಯ ಮಾಲಕ ಎಂದು ತೋರಿಸಲು ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೇಳಿದ್ದು ಸಮಯವಕಾಶ ನೀಡಲಾಯಿತು.**
**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**
**ಬೆಳಗಾವಿ.**

**ಮರು ವಿಚಾರಣೆ ಇಲ್ಲ.**

(ಸಾಕ್ಷಿಗೆ ಕನ್ನಡ ಭಾಷೆ ಬರುವುದಿಲ್ಲ ಎಂದು ವಕೀಲರು ಹೇಳಿದ ಕಾರಣ ಹಿಂದಿ (ಮರಾಠಿ) ಭಾಷೆ ಮತ್ತು ಕನ್ನಡ ಭಾಷೆ ತಿಳಿದಿದೆ ಎಂದು ಹೇಳಿರುವ ವಕೀಲರಾದ ಶ್ರೀಮತಿ ಎಸ್.ಎಸ್.ಜೆ ರವರನ್ನು ತರ್ಜುಮೆದಾರರಾಗಿ ನೇಮಕ ಮಾಡಿದ್ದು ಸದರಿಯವರು ಪ್ರತಿವಾದಿಯರ ಪರ ವಕೀಲರು ಕನ್ನಡದಲ್ಲಿ ಕೇಳಿದ ಪ್ರಶ್ನೆಗಳನ್ನು ಮರಾಠಿಗೆ ತರ್ಜುಮೆ ಮಾಡಿ ಸಾಕ್ಷಿಗೆ ಹೇಳಲು, ಸಾಕ್ಷಿಯು ಮರಾಠಿಯಲ್ಲಿ ಹೇಳಿದ ಉತ್ತರವನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಹೇಳಲು ಒಪ್ಪಿಕೊಂಡಿರುತ್ತಾರೆ . ರೂ.200/- ನ್ನು ತರ್ಜುಮೆದಾರರ ಫೀ ಎಂದು ನಿಗದಿಪಡಿಸಿದ್ದು ವಾದಿಯು ಸದರಿ ಫೀಯನ್ನು ನೀಡಲು ಆದೇಶಿಸಲಾಗಿದೆ.)

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**
**ಬೆಳಗಾವಿ.**